ಒಟ್ಟು ಪ್ರಶ್ನೆಗಳ ಸಂಖ್ಯೆ : 34 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 4
Total No. of Questions : 34 ] [ Total No. of Printed Pages : 4

**ಸಂಕೇತ ಸಂಖ್ಯೆ : 08-K (OS)**
**Code No. : 08-K (OS)**

**ಶಿಕ್ಷಣ – IV**

**EDUCATION – IV**

# ವಿಷಯಾಧಾರಿತ ಬೋಧನಾ ಪದ್ಧತಿ
# ಪ್ರಥಮ ಭಾಷೆ – ಕನ್ನಡ

# CONTENT BASED METHODOLOGY OF TEACHING FIRST LANGUAGE — KANNADA

**(ಹಳೆ ಪಠ್ಯವಸ್ತು)**
**( Old Syllabus )**

ದಿನಾಂಕ : 07. 06. 2017 ]
Date : 07. 06. 2017 ]

ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 100
Time : 10.00 A.M. to 1.00 P.M. ] [ Max. Marks : 100

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

**ಭಾಗ – A**

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉತ್ತರವು 3 ಪುಟಗಳಿಗೆ ಮೀರದಿರಲಿ. ಪ್ರತಿಯೊಂದು ಪ್ರಶ್ನೆಯ (a) ಮತ್ತು (b) ಉಪ–ಪ್ರಶೆಗಳನ್ನು ಕಡ್ಡಾಯವಾಗಿ ಉತ್ತರಿಸಬೇಕು. ಪ್ರತಿ ಪ್ರಶ್ನೆಗೆ **ಹತ್ತು** ಅಂಕಗಳು : 4 × 10 = 40

1. a) ಕನ್ನಡ ಭಾಷಾ ಬೋಧಕರಲ್ಲಿ ನಿರೀಕ್ಷಿಸಬಹುದಾದ ಯಾವುದಾದರೂ ಐದು ಗುಣಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

   b) ಪ್ರಾಥಮಿಕ ಶಾಲಾ ಮಕ್ಕಳಲ್ಲಿ ಸಾಹಿತ್ಯಾಭಿರುಚಿಯನ್ನುಂಟು ಮಾಡಲು ಭಾಷಾ ಶಿಕ್ಷಕರು ಹಮ್ಮಿಕೊಳ್ಳುವ ವಿವಿಧ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ. 5 + 5

2. a) ಪ್ರಾಥಮಿಕ ಶಾಲಾಹಂತದ ಮಾತೃಭಾಷಾ ಬೋಧನೆಯ ಉದ್ದೇಶಗಳಲ್ಲಿ ಯಾವುದಾದರೂ ಐದನ್ನು ಸಂಕ್ಷಿಪ್ತವಾಗಿ ತಿಳಿಸಿ.

   b) ಭಾಷಾ ಕಲಿಕೆಯ ತತ್ವಗಳಲ್ಲಿ 'ಮೊದಲು ಮಾತೃಭಾಷೆ' ಹಾಗೂ 'ಅಭ್ಯಾಸ ನಿಯಮ'ದ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸಿ. 5 + 5

3. a) ವಿದ್ಯಾರ್ಥಿಗಳಲ್ಲಿ ಆಲಿಸುವಾಗ ಕಂಡುಬರುವ ದೋಷಗಳಾವುವು ? ವಿವರಿಸಿ.

b) ಮಕ್ಕಳ ಮಾತುಗಾರಿಕೆಯನ್ನು ಉತ್ತಮಪಡಿಸುವಲ್ಲಿ ಕಥನ ನಿರೂಪಣೆ ಮತ್ತು ನಾಟಕಾಭಿನಯದ ಪಾತ್ರವೇನು ? 5 + 5

4. a) ಕನ್ನಡ ಭಾಷಾ ಪ್ರಶ್ನೆಪತ್ರಿಕೆಯ ರಚನೆಯ ಹಂತಗಳನ್ನು ತಿಳಿಸಿ.

b) ಭಾಷಾ ಮೌಲ್ಯಮಾಪನದಲ್ಲಿ ಮೌಖಿಕ ಪರೀಕ್ಷೆಯ ಗುಣಗಳು ಮತ್ತು ಅವಗುಣಗಳನ್ನು ಚರ್ಚಿಸಿ. 5 + 5

5. a) ಮುದ್ರಿತ ಸಂಪನ್ಮೂಲಗಳು ಯಾವುವು ? ಅವುಗಳು ಭಾಷಾ ಶಿಕ್ಷಕನಿಗೆ ಬೋಧನೆಯಲ್ಲಿ ಹೇಗೆ ಸಹಕಾರಿಯಾಗಿವೆ ? ವಿವರಿಸಿ.

b) ಭಾಷಾ ಬೋಧನೆಯಲ್ಲಿ ದೂರದರ್ಶನದ ಪಾತ್ರವನ್ನು ವಿವರಿಸಿ. 5 + 5

6. a) ನಾಲ್ಕನೇ ತರಗತಿಯ ಕನ್ನಡ ವಿಷಯದಲ್ಲಿ ನಿಮಗಿಷ್ಟವಾದ ಯಾವುದಾದರೊಂದು ಗದ್ಯಪಾಠಕ್ಕೆ ಪಾಠಯೋಜನೆಯನ್ನು ತಯಾರಿಸಿ.

b) ಪಾಠಯೋಜನೆ ಎಂದರೇನು ? ಪಾಠಯೋಜನೆಯು ಶಿಕ್ಷಕರಿಗೆ ಅವಶ್ಯಕ. ಏಕೆ ?

6 + 4

7. a) ಸಾಮರ್ಥ್ಯಾಧಾರಿತ ಬೋಧನೆಯ ಹಂತಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

b) ಗದ್ಯಬೋಧನೆಯ ಸಾಮಾನ್ಯ ಉದ್ದೇಶಗಳನ್ನು ತಿಳಿಸಿ. 6 + 4

## ಭಾಗ – B

II. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಏಳು*** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ***ಐದು*** ಅಂಕಗಳು : $7 \times 5 = 35$

8. ಮಾತೃಭಾಷೆ ಎಂದರೇನು ? ಮಾತೃಭಾಷೆಯಿಂದಾಗುವ ಯಾವುದಾದರೂ ನಾಲ್ಕು ಪ್ರಯೋಜನಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

9. ವಿದ್ಯಾರ್ಥಿಗಳ ಬರವಣಿಗೆಯನ್ನು ಉತ್ತಮಪಡಿಸಲು ಶಿಕ್ಷಕರಾಗಿ ನೀವು ಕೈಗೊಳ್ಳಬಹುದಾದ ತಂತ್ರಗಳಾವುವು ? ತಿಳಿಸಿ.

10. ಸಂಪನ್ಮೂಲ ಘಟಕ ಎಂದರೇನು ? ಸಂಪನ್ಮೂಲ ಘಟಕದ ರೂಪುರೇಷೆಗಳನ್ನು ಪಟ್ಟಿಮಾಡಿ.

11. ಪ್ರಶಂಸಾ ಪಾಠಬೋಧನಾ ಕ್ರಮದಲ್ಲಿ ಪದ್ಯದ ಬೋಧನಾ ಕ್ರಮವನ್ನು ಉದಾಹರಣೆ ಸಹಿತ ತಿಳಿಸಿ.

12. ಭಾಷಾ ಪಠ್ಯಪುಸ್ತಕ ರಚನಾ ತತ್ವಗಳಲ್ಲಿ ಯಾವುದಾದರೂ ಐದನ್ನು ವಿವರಿಸಿ.

13. ಬೋಧನಾ ಸಂಪನ್ಮೂಲಗಳು ಎಂದರೇನು ? ಇವುಗಳ ಪ್ರಯೋಜನಗಳನ್ನು ಪಟ್ಟಿಮಾಡಿ.

14. ಮಕ್ಕಳ ಮಾತುಗಾರಿಕೆ ಕೌಶಲವನ್ನು ಉತ್ತಮಪಡಿಸುವಲ್ಲಿ ಚರ್ಚೆಯ ಮಹತ್ವವೇನು ? ತಿಳಿಸಿ.

15. ಕನ್ನಡ ಭಾಷಾ ಪಠ್ಯಪುಸ್ತಕದ ಯಾವುದಾದರೂ ಐದು ಬಾಹ್ಯ ಲಕ್ಷಣಗಳು ಹಾಗೂ ಐದು ಆಂತರಿಕ ಗುಣಲಕ್ಷಣಗಳನ್ನು ಪಟ್ಟಿಮಾಡಿ.

16. ಭಾಷಾ ಕಲಿಕೆಯಲ್ಲಿ 'ಪ್ರವಾಸ' ಅತ್ಯಂತ ಮುಖ್ಯವಾಗಿದೆ. ಏಕೆ ? ಚರ್ಚಿಸಿ.

17. ಕಪ್ಪುಹಲಗೆ ಮತ್ತು ಚಿತ್ರಪಟಗಳನ್ನು ನಿಮ್ಮ ತರಗತಿಯ ಬೋಧನೆಯಲ್ಲಿ ಪರಿಣಾಮಕಾರಿಯಾಗಿ ಹೇಗೆ ಬಳಸಿಕೊಳ್ಳುವಿರಿ ? ತಿಳಿಸಿ.

## ಭಾಗ – C

III. ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉತ್ತರವು ½ ಪುಟಕ್ಕೆ ಮೀರದಿರಲಿ. ಪ್ರತಿ ಪ್ರಶ್ನೆಗೆ **ಮೂರು** ಅಂಕಗಳು : $5 \times 3 = 15$

18. ವಿದ್ಯಾರ್ಥಿಗಳಲ್ಲಿ ಕಂಡುಬರುವ ಉಚ್ಚಾರಣೆಯ ದೋಷಗಳನ್ನು ನಿವಾರಿಸಲು ನೀವು ಕೈಗೊಳ್ಳಬಹುದಾದ ಕ್ರಮಗಳು ಯಾವುವು ?

19. ಪಾಠಬೋಧನೆಯ ಅಂತ್ಯದಲ್ಲಿ ಗೃಹಪಾಠ ನೀಡುವುದರ ಮಹತ್ವವೇನು ?

20. ಪ್ರಾಥಮಿಕ ಹಂತದ ಮಕ್ಕಳಲ್ಲಿ ಓದುವ ಕೌಶಲವನ್ನು ಕಲಿಸಲು ಪೂರ್ವಸಿದ್ಧತಾ ಚಟುವಟಿಕೆಗಳು ಅಗತ್ಯವೇ ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ.

21. ಮಕ್ಕಳ ಬರವಣಿಗೆಯನ್ನು ಉತ್ತಮಪಡಿಸುವಲ್ಲಿ ದಿನಚರಿಯ ಪಾತ್ರವನ್ನು ತಿಳಿಸಿ.

22. 'ಸ್ತ್ರೀಲಿಂಗ' – ಈ ವ್ಯಾಕರಣಾಂಶವನ್ನು ಅನುಗಮನ ಪದ್ಧತಿಯಲ್ಲಿ ಹೇಗೆ ಬೋಧಿಸುವಿರಿ ? ಉದಾಹರಣೆ ಸಹಿತ ತಿಳಿಸಿ.

23. ಭಾಷಾ ಪಠ್ಯಪುಸ್ತಕದ ಮಹತ್ವವನ್ನು ತಿಳಿಸಿ.

24. ನೈದಾನಿಕ ಪರೀಕ್ಷೆಯ ಹಂತಗಳಾವುವು ?

## ಭಾಗ – D

IV. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿ. ಪ್ರತಿ ಉತ್ತರವು ಒಂದೆರಡು ವಾಕ್ಯಗಳಿಗೆ ಮೀರದಿರಲಿ. ಪ್ರತಿ ಪ್ರಶ್ನೆಗೆ **ಒಂದು** ಅಂಕ : $10 \times 1 = 10$

25. ಒಂದರಿಂದ ಐದನೇ ತರಗತಿಗೆ ಕನ್ನಡ ಭಾಷಾ ಶಿಕ್ಷಕನಾಗಲು ಇರಬೇಕಾದ ಶೈಕ್ಷಣಿಕ ಅರ್ಹತೆಯನ್ನು ತಿಳಿಸಿ.

26. ವರ್ಣನೆ ಎಂದರೇನು ?

27. ಗಟ್ಟಿ ಓದು ಹಾಗೂ ಮೌನ ಓದಿಗೆ ಇರುವ ಒಂದು ವ್ಯತ್ಯಾಸ ತಿಳಿಸಿ.

28. ಅಣುಬೋಧನೆ ಎಂದರೇನು ?

29. ಸಂಭಾಷಣಾ ರೂಪದಲ್ಲಿರುವ ಒಂದು ಗದ್ಯವನ್ನು ಬೋಧಿಸಲು ನೀವು ಅಳವಡಿಸಿಕೊಳ್ಳಬಯಸುವ ಬೋಧನಾ ವಿಧಾನವನ್ನು ಹೆಸರಿಸಿ.

30. ಕ.ಕ.ಮ. – ವಿಸ್ತರಿಸಿ.

31. ಪ್ರಬಂಧ ತಿದ್ದುವ ಯಾವುದಾದರೊಂದು ವಿಧಾನವನ್ನು ಹೆಸರಿಸಿ.

32. ಮಕ್ಕಳ ಓದುಗಾರಿಕೆಯಲ್ಲಿನ ದೋಷವನ್ನು ಪರಿಹರಿಸಲು ಶಿಕ್ಷಕರಾಗಿ ನೀವು ಹೇಳಿಕೊಡುವ ಒಂದು ನಾಲಿಗೆ ಸುರುಳಿಯನ್ನು ಬರೆಯಿರಿ.

33. ಲಿಖಿತ ಪರೀಕ್ಷೆ ಎಂದರೇನು ?

34. ಯಾವುದಾದರೂ ಒಂದು ಪ್ರಬಂಧ ಮಾದರಿ ಉತ್ತರದ ಪ್ರಶ್ನೆಯನ್ನು ರಚಿಸಿ.